**ಚಿತ್ರಪಟ ಕಥನ**


ಹಸುರು ಎಲೆಗಳ ನಡುವೆ ಹಸುರಾಗಿ ಬೆರೆತುಹೋಗಿರುವ ಕೀಟ

**ಆತ್ಮರಕ್ಷಣೆಗೆ ಇಲ್ಲವೇ ಆಹಾರ ಸಂಪಾದನೆಗೆ ಮನುಷ್ಯ ಮಾತ್ರವಲ್ಲದೆ, ಕೆಲವು ಜೀವಿಗಳಿಗೂ ವೇಷ ಧರಿಸುವ ವರವನ್ನು ಪ್ರಕೃತಿ ನೀಡಿದೆ. ನಿಜ ಬಣ್ಣ ಮರೆಮಾಚುವ, ಬಣ್ಣ ಬದಲಿಸುವ, ಇಲ್ಲವೇ ರೂಪಾಂತರಗೊಳ್ಳುವ ಪ್ರಾಣಿಗಳ– ಛದ್ಮವೇಷಧಾರಿಗಳ– ಚಿತ್ರಪಟ ಕಥನ.**

# ಕಪಟ ರೂಪಿಗಳು



■ ಶಶಿ ಸಿಂಗ್

ಈ ಪ್ರಕೃತಿಯ ಅನೇಕ ಸಂಗತಿಗಳನ್ನು ಗಮನವಿಟ್ಟು ನೋಡಬೇಕು. ಇಲ್ಲದಿದ್ದರೆ ತಿಪ್ಪರಲಾಗ ಹಾಕಿದರೂ ಗೊತ್ತಾಗುವುದಿಲ್ಲ. ಒಂದು ಸಣ್ಣ ಚಿಟ್ಟೆ, ಹುಳ, ಹಾವು, ಹೂವು, ಕಡ್ಡಿ, ಕೊನೆಗೆ ಕಸವನ್ನೂ ಸೂಕ್ಷ್ಮವಾಗಿ ಗಮನಿಸಬೇಕು.

ಅಸಲಿ ಕಥೆ ಏನೆಂದರೆ, ಈ ಭೂಮಿ ಉಗಮವಾದ ಕಾಲದಿಂದಲೂ ವಿಕಸನದ ಹಾದಿಯಲ್ಲಿ ನಾನಾ ಬಗೆಯ ರೂಪಾಂತರಗಳು ಆಗಿಹೋಗಿವೆ. ನದಿಯ ಸೆಲೆಯಿಂದ ಮರದ ಪೊಟರೆಯಲ್ಲಿರುವ ಕಪ್ಪೆ ಕೂಡ ಬದಲಾಗಿದೆ. ಪ್ರಕೃತಿಯಲ್ಲಿ ನಡೆದಿರುವ ಈ ಕೌತುಕ ಬದಲಾವಣೆ ನಮ್ಮ ಊಹೆಗೂ ನಿಲುಕದ ಸಂಗತಿ. ಈ ಜೀವಯಾನದ ಪಯಣದಲ್ಲಿ ಕೆಲವು ಜೀವರಾಶಿಗಳು ಶತ್ರುಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಪ್ರಕೃತಿಯಿಂದ ಮುಖವಾಡಗಳನ್ನು ಪಡೆದಿವೆ. ಕೆಲವು ಜೀವರಕ್ಷಕ ಬಣ್ಣದ ಚರ್ಮಗಳನ್ನು ಗಳಿಸಿವೆ. ಮತ್ತೊಂದಿಷ್ಟು ಬಣ್ಣ ಬದಲಿಸುವ ವಿದ್ಯೆ ಕಲಿತಿವೆ. ಇದನ್ನು ನಾವಿಲ್ಲಿ 'ಕಪಟರೂಪ' ಎಂದು ಭಾವಿಸೋಣ.

ಸಾಮಾನ್ಯ ಎನಿಸುವ ಸಣ್ಣ ಕೀಟದಿಂದ ಹಿಡಿದು ದೈತ್ಯ ವನ್ಯ ಮೃಗಗಳವರೆಗೆ ಕೌತುಕದ ಈ ಮರೆಮಾಚುವಿಕೆ ಚಾಲ್ತಿಯಲ್ಲಿದೆ. ಈ ರೂಪಪಲ್ಲಟ ಆತ್ಮರಕ್ಷಣೆ ಹಾಗೂ ಆಹಾರ ಸಂಪಾದನೆ – ಎರಡಕ್ಕೂ ಅಗತ್ಯ. ಕೀಟಗಳು ಮಾಡಬಲ್ಲ ಈ ಕಣ್ಣಿಗೆ ಮಣ್ಣೆರಚುವ, ವೇಷ ಕಟ್ಟುವ ಮಾಯಾವಿ ವರವನ್ನು ಆಂಗ್ಲ ಭಾಷೆಯಲ್ಲಿ 'ಕ್ಯಾಮೋಫ್ಲೇಜ್' ಎಂದು ಕರೆಯುತ್ತಾರೆ.

ಕಪಟರೂಪತನ ಜೀವಿಗಳಿಗೆ ಸ್ವಾಭಾವಿಕವಾಗಿಯೇ ಬಂದಿದೆ. ಅಚ್ಚರಿ ಎಂದರೆ, ವಿಷಕಾರಿಯಲ್ಲದ ಕೆಲ ಹಾವುಗಳು ವಿಷ ಸರ್ಪಗಳಂತೆ ತಮ್ಮ ಮೈಬಣ್ಣವನ್ನು ಕೆಲವೊಮ್ಮೆ ಬದಲಿಸಿಕೊಳ್ಳುತ್ತವೆ. ಮೈ ಮೇಲಿನ ಪಟ್ಟೆಗಳನ್ನು ಬದಲಿಸಿಕೊಳ್ಳುತ್ತವೆ. ಹೀಗೆ ವೇಷ


ಪಳೆಯುಳಿಕೆಗಳನ್ನು ಹೊತ್ತು ತಿರುಗುವ 'ಬ್ಯಾಗ್ ವರ್ಮ್'